ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ

FDP No : 06/2015

CW.1 PW.1

**ಹೆಸರು** : ಅನಂತರಾಮ್. ಹೆಚ್.
ತಂದೆ/ಗಂಡ : ಡಿ.ಹನುಮಂತರಾಯಪ್ಪ
ವಯಸ್ಸು : 48 ವರ್ಷ
ಉದ್ಯೋಗ : ತಾಲ್ಲೂಕು ಭೂಮಾಪಕರು
ವಾಸ : ರಾಮನಗರ.

ಸ್ವಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ನ್ಯಾಯಾಲಯದಿಂದ ದಿ:18.10.2021

2013 ರಿಂದ ಇದುವರೆವಿಗೂ ನಾನು ಚನ್ನಪಟ್ಟಣ ತಾಲ್ಲೂಲು ಕಚೇರಿಯಲ್ಲಿ ತಾಲ್ಲೂಕು ಭೂಮಾಪಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ನಾನು ಈ ದಾವೆಯಲ್ಲಿ ನ್ಯಾಯಾಲಯದ ನಿಯೋಗಿಯಾಗಿ ನೇಮಕವಾಗಿದ್ದು, ನಾನು ಸ್ಥಳ ಪರಿಶೀಲನೆ ಮಾಡಿ ನ್ಯಾಯಾಲಯಕಕ್ಕೆ ನನ್ನ ವರದಿಯನ್ನು ಸಲ್ಲಿಸಿರುತ್ತೇನೆ.

ಪಕ್ಷಗಾರರಿಗೆ ನೀಡಿದ ನೋಟೀಸನ್ನು ನಿಸಿ.1 ಎಂದು, ಮಹಜರ್ ಅನ್ನು ನಿಸಿ.2 ಎಂದು, ನಾನು ಸಲ್ಲಿಸಿದ ವರದಿಯನ್ನು ನಿಸಿ.3 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಅರ್ಜಿದಾರರ ಪರ:ಜೆ.ಟಿ.ಪಿ. ವಕೀಲರಿಂದ:

ನಾನು ಈ ನ್ಯಾಯಾಲಯದ ಮತ್ತು ಮೇಲ್ಮನವಿ ನ್ಯಾಯಾಲಯದ ಡಿಕ್ರಿಗಳನ್ನು ಪಡೆದು ಸ್ಥಳ ಪರೀಶೀಲನೆ ಮಾಡಿರುತ್ತೇನೆ. ನಾನು ದಾಖಲೆಗಳನ್ನೂ ಸಹ ಪಡೆದಿರುತ್ತೇನೆ. ನಾನು ಡಿಕ್ರಿಯನ್ನು ನೋಡಿ ನಕಾಶೆಯನ್ನು ತಯಾರು ಮಾಡಿರುತ್ತೇನೆ. ನಾನು ಸದರಿ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನ್ಯಾಯಾಲಯದ ಡಿಕ್ರಿಯಲ್ಲಿ ಯಾವ ಪಕ್ಷಗಾರರರಿಗೆ ಎಷ್ಟು ಹಿಸ್ಸೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಸದರಿ ಆದೇಶದಂತೆ ನಾನು ವರದಿ ಸಲ್ಲಿಸಲು ನನಗೆ ತೊಂದರೆ

ಇತ್ತು. ನಾನು ಡಿಕ್ರಿಯನ್ನು ನೋಡಿ ಅದರಂತೆ ಕಾರ್ಯ ನಿರ್ವಹಿಸದೆ ಈ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಕಾಶೆ ಮಾಡಿದ ಬಗ್ಗೆ ನನ್ನ ವರದಿಯಲ್ಲಿ ಲಗತ್ತಿಸಿಲ್ಲ ಎಂದರೆ ಸರಿ.

ನಕಾಶೆ ಮಾಡಲು ಆಜುಬಾಜು ಆಸ್ತಿಗಳಿಗೆ ಪಾಯಿಂಟ್ ಮಾಡಿ ನಕಾಶೆ ತಯಾರಿಸಿದ ಬಗ್ಗೆ ನಾನು ನಕಾಶೆಯನ್ನು ನನ್ನ ವರದಿಯ ಜೊತೆಗೆ ಲಗತ್ತಿಸಿರುವುದಿಲ್ಲ ಎಂದರೆ ಸರಿ. ಅಂತಿಮ ಡಿಕ್ರಿಯನ್ನು ಅರ್ಥ ಮಾಡಿಕೊಳ್ಳಲು ನಾನು ಪ್ರಯತ್ನಿಸಿರುತ್ತೇನೆ. ನ್ಯಾಯಾಲಯದ ಡಿಕ್ರಿಯನ್ನು ನಾನು ಅನುಸರಿಸಬೇಕು ಎಂದರೆ ಸರಿ. ನಾನು ಸ್ಥಳಕ್ಕೆ ಹೋಗದೆ ಸರಿಯಾಗಿ ವರದಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಡಿಕ್ರಿಯನ್ನು ತಹಶೀಲ್ದಾರ್ ರವರಿಗೆ ತೋರಿಸಿರುತ್ತೇನೆ. ತಹಶೀಲ್ದಾರ್ ರವರು ನನಗೆ ಯಾವುದೇ ವರದಿಯನ್ನು ನೀಡಿರುವುದಿಲ್ಲ. ನ್ಯಾಯಾಲಯದ ಡಿಕ್ರಿಯನ್ನು ಉಲ್ಲಂಘಿಸಬಾರದು ಎಂದು ತಹಶೀಲ್ದಾರ್ ರವರು ನನಗೆ ಹೇಳಿರುವುದಿಲ್ಲ. ನಾನು ಸ್ಥಳಕ್ಕೆ ಹೋಗಿ ಕಚ್ಚಾ ನಕಾಶೆ ತಯಾರಿಸಿದ ಬಗ್ಗೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಕಚ್ಚಾ ನಕಾಶೆಯನ್ನು ನಾನು ತಹಶೀಲ್ದಾರ್ ರವರಿಗೆ ತೋರಿಸಿರುವುದಿಲ್ಲ. ಎ.ಡಿ.ಎಲ್.ಆರ್. ರವರಿಗೆ ತೋರಿಸಿರುತ್ತೇನೆ. ಎ.ಡಿ.ಎಲ್.ಆರ್. ರವರು ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ನಾನು ನನ್ನ ಕಾರ್ಯವನ್ನು ನಿರ್ವಹಿಸಲು ವಿಫಲನಾಗಿರುತ್ತೇನೆ ಎಂದರೆ ಸರಿಯಲ್ಲ.

(ಎದುರುದಾರರು ಮತ್ತು ಎದುರುದಾರರ ಪರ ವಕೀಲರು ಗೈರುಹಾಜರಾಗಿರುತ್ತಾರೆ. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಓ
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.